2 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಲಯದ ನ್ಯಾಯಾಧೀಶರು,
ಚಿಕ್ಕಮಗಳೂರು.

**<u>ಸತ್ರ ಮೊಕದ್ದಮೆ ಸಂಖ್ಯೆಃ 48/2015</u>**

| | |
|---|---|
| ಆರೋಪಿಯ ಹೆಸರು | ಃ ಗುರುಮೂರ್ತಿ |
| ತಂದೆಯ ಹೆಸರು | ಃ ತಿಮ್ಮಶೆಟ್ಟಿ |
| ವಯಸ್ಸು | ಃ 30 ವರ್ಷ |
| ಉದ್ಯೋಗ | ಃ ನೇಕಾರ ವೃತ್ತಿ |
| ವಾಸಸ್ಥಳ | ಃ ಮಂಜುನಾಥನಗರ, ಬೈಪಾಸ್ ರಸ್ತೆ ಎಡಬಾಗ, ತಿಪಟೂರು ಟೌನ್. |

<u>ಕಲಂ 313 ಸಿ.ಅರ್ ಪಿ.ಸಿ ಅಡಿಯಲ್ಲಿ ಆರೋಪಿತನ ಹೇಳಿಕೆ.</u>

ಪ್ರಶ್ನೆ 1ಃ ಅಭಿಯೋಜನೆಯ ಸಾಕ್ಷಿಗಳ ಸಾಕ್ಷ್ಯ ವಿಚಾರವನ್ನು ಕೇಳಿದ್ದೀರಾ?
ಉತ್ತರಃ ಕೇಳಿದ್ದೇನೆ

ಪ್ರಶ್ನೆ 2ಃ ಫ್ರಾ.ಸಾ.1 ಶಾರದಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರ ಮಗಳು ಮಮತಳಾನ್ನು ಮದುವೆಯಾಗಿ ಎರಡು ವರ್ಷಗಳವರೆಗೆ ಆಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾಗಿ, ನಂತರದಲ್ಲಿ ನೀನು ಹಾಗೂ ನಿನ್ನ ತಾಯಿ ತೊಳಸಮ್ಮ ಹಣವನ್ನು ಪಡೆದುಕೊಂಡು ಬರುವಂತೆ ಹೇಳಿ, ಆಕೆಗೆ ಹೊಡೆಯುವುದು ಮತ್ತು ಬಡಿಯುವುದನ್ನು ಮಾಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರಶ್ನೆ 3ಃ ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಅವರ ಮಗಳನ್ನು ಕರೆದುಕೊಂಡು ಅವರ ಊರಿಗೆ ಹೋಗಿ ಅಲ್ಲೇ ಮೂರು ದಿನ ಉಳಿದುಕೊಂಡಿದ್ದಾಗಿ, ಅವರು ನಿನ್ನ ಮಕ್ಕಳನ್ನು ಅಂಗನವಾಡಿಗೆ ಬಿಟ್ಟು ವಾಪಾಸ್ಸು ಮನೆಗೆ ಬಂದು ನೋಡಿದಾಗ ಅವರ ಮಗಳ ಬಾಯಿಂದ ನೊರೆ ಬರುತ್ತಿದ್ದಾಗಿ ಆಗ ಅವರು ಆಕೆಯನ್ನು ಕೇಳಿದಾಗ ಆಕೆ ಆರೋಪಿಯಾದ ನೀನು ಆಕೆಗೆ ವಿಷವನ್ನು ಟಾನಿಕ್ ಎಂದು ಹೇಳಿ ಆಕೆಯ ಬಾಯಿಯನ್ನು ನಿನ್ನ ಕೈಯಿಂದ ಹಿಡಿದು ಆಕೆಗೆ ಕುಡಿಸಿದ್ದಾಗಿ ಹೇಳಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?
ಉತ್ತರಃ ಸುಳ್ಳು

ಪ್ರಶ್ನೆ 4ಃ ಫ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅವರ ಮಗಳಿಗೆ ಆರೋಪಿಯಾದ ನೀನು ಮತ್ತು ನಿನ್ನ ತಾಯಿ

ಹೊಡೆಯುವುದು, ಬಡಿಯುವುದು ಮತ್ತು ದುಡ್ಡು ತೆಗೆದುಕೊಂಡು ಬಾ ಎಂದು ಹೇಳಿ ಕಿರುಕುಳ ನೀಡುತ್ತಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 5ಃ ಪ್ರಾ.ಸಾ.1 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನೀನು ಒಂದು ಲೋಟದಲ್ಲಿದ್ದ ಹಾಲಿಗೆ ವಿಷವನ್ನು ಹಾಕಿ ಬಲವಂತವಾಗಿ ಕುಡಿಸಿ ಸಾಯಿಸಿದ ವ್ಯಕ್ತಿ ಈಗ ನ್ಯಾಯಾಲಯದ ಮುಂದೆ ಇರುವ ಆರೋಪಿಯಾದ ನೀನೇ ಆಗಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 6ಃ ಪ್ರಾ.ಸಾ.2 ಸುನಂದ ಇವರು ತಮ್ಮ ಸಾಕ್ಷ್ಯದಲ್ಲಿ ಆರೋಪಿಯಾದ ನೀನು ಅವರ ತಂಗಿ ಮಮತಳನ್ನು ಮದುವೆಯಾಗಿರುವುದಾಗಿ , ಮದುವೆಯಾದ 4 ವರ್ಷವರೆಗೆ ಆಕೆಯನ್ನು ಚೆನ್ನಾಗಿ ನೋಡಿಕೊಂಡಿದ್ದಾಗಿ, ನಂತರದಲ್ಲಿ ಆಕೆಗೆ ತವರು ಮನೆಯಿಂದ ದುಡ್ಡು ತೆಗೆದುಕೊಂಡು ಬಾ, ಇಲ್ಲದಿದ್ದರೆ ತಾನು ಬೇರೆ ಮದುವೆಯಾಗುತ್ತೇನೆ ಎಂದು ಹಿಂಸೆ ಕೊಡುತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 7ಃ ಪ್ರಾ.ಸಾ.2 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನೀನು ಅವರ ಊರಿಗೆ ಬಂದಿದ್ದು, ನಿನ್ನ ಹೆಂಡತಿ ಜೊತೆ ಅವರ ಮನೆಯಲ್ಲಿ 3 ದಿನ ಉಳಿದುಕೊಂಡಿದ್ದುದ್ದಾಗಿ, ನೀನು ಅವಳಿಗೆ ಟಾನಿಕ್ ಎಂದು ಹೇಳಿ ವಿಷವನ್ನು ಒತ್ತಾಯ ಮಾಡಿ ಕುಡಿಸಿದ್ದರಿಂದ ಆಕೆ ಮೃತ ಪಟ್ಟಿದ್ದು, ಆಕೆ ಸಾಯಲು ಕಾರಣ ನೀನೇ ಅಗಿದ್ದುದ್ದಾಗಿ, ಕಿರುಕುಳ ಕೊಟ್ಟಿದ್ದಲ್ಲದೆ ವಿಷ ಕುಡಿಸಿ ಕೊಲೆ ಮಾಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 8ಃ ಪ್ರಾ.ಸಾ.4 ರಂಗಸ್ವಾಮಿ, ಇವರು ತಮ್ಮ ಸಾಕ್ಷ್ಯದಲ್ಲಿ ಅಂದಾಜು 4 ವರ್ಷಗಳ ಹಿಂದೆ ಆರೋಪಿಯಾದ ನೀನು ಮಮತಾಳನ್ನು ಮದುವೆಯಾಗಿದ್ದು, ಮದುವೆಯಾದ ನಂತರ ಆರೋಪಿಯಾದ ನೀನು ಅವಳೊಂದಿಗೆ ಜಗಳ ಮಾಡಿ ತವರು ಮನೆಗೆ ಕಳುಹಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 9ಃ ಪ್ರಾ.ಸಾ.4 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮಮತಾಳು ಸಾಯುವ 2-3 ದಿನಗಳ ಹಿಂದೆ ಆರೋಪಿಯಾದ ನೀನು ಆಕೆಯ ಮನೆಗೆ ಬಂದಿದ್ದಾಗಿ ಆ ಸಮಯದಲ್ಲಿ ನೀನು ಅವಳಿಗೆ ಹುಷಾರು ಇಲ್ಲದ್ದರಿಂದ ಮತ್ತು ದಪ್ಪ ಆಗುವ ಸಲುವಾಗಿ ಈ ಔಷಧಿಯನ್ನು ತಂದಿದ್ದೇನೆ ಎಂದು ಸದರಿ ಔಷಧಿಯನ್ನು ಆರೋಪಿಯಾದ ನೀನು ಮೃತ ಮಮತಾಳಿಗೆ ಕುಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 10ಃ ಪ್ರಾ.ಸಾ.5 ನಾರಾಯಣ ಶೆಟ್ಟಿ, ಇವರು ತಮ್ಮ ಸಾಕ್ಷ್ಯದಲ್ಲಿ ಅಂದಾಜು 4 ವರ್ಷಗಳ ಹಿಂದೆ ಆರೋಪಿಯಾದ ನೀನು ಮಮತಾಳನ್ನು ಮದುವೆಯಾಗಿರುವುದಾಗಿ, ನಂತರದಲ್ಲಿ ನೀನು ಅವಳಿಗೆ ದುಡ್ಡು ತೆಗೆದುಕೊಂಡು ಬಾ ಎಂದು ಪೀಡಿಸಿ, ಕಿರುಕುಳ ಕೊಡುತ್ತಿದ್ದುದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 11ಃ ಪ್ರಾ.ಸಾ.5 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮಮತಾಳಿಗೆ ಬಾಣಂತಿ ಸನ್ನೆಯಾಗಿದ್ದರಿಂದ ತನ್ನ ತವರು ಮನೆಗೆ ಬಂದಿದ್ದಾಗಿ, ಆಗ ಆರೋಪಿಯಾದ ನೀನು ಎಸ್. ಬಿದರೆ ಗ್ರಾಮಕ್ಕೆ ಬಂದು 2-3 ದಿನ ಇದ್ದು, ಮೃತಳಿಗೆ ಔಷಧಿ ಎಂದು ವಿಷ ಕುಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 12ಃ ಪ್ರಾ.ಸಾ.7 ಮರಿರಂಗಶೆಟ್ಟಿ, ಇವರು ತಮ್ಮ ಸಾಕ್ಷ್ಯದಲ್ಲಿ ದಿಃ 21.01.2015 ರಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಾಗ ಸ್ಥಳವನ್ನು ಸತೀಶ್ ತೋರಿಸಿದ್ದು, ಆಗ ಸ್ಥಳದಲ್ಲೇ ಇದ್ದ ಆರೋಪಿಯಾದ ನಿನಗೆ ವಿಷದ ಬಾಟಲಿಯನ್ನು ಎಲ್ಲಿ ಇಟ್ಟಿದ್ದೀಯಾ ಎಂದು ತಾನು ಕೇಳಿದ್ದು, ಆಗ ನೀನು ಓಣಿಯಲ್ಲಿ ಇರುವ 2 ಚೀಲದ ಸಿಪ್ಪೆ ಮಟ್ಟೆಗಳ ನಡುವೆ ಇಟ್ಟಿರುವುದಾಗಿ ಹೇಳಿ ತೆಗೆದು ತೋರಿಸಿ, ಸದರಿ ವಿಷದ ಬಾಟಲಿಯಿಂದಲೇ ತನ್ನ ಹೆಂಡತಿಗೆ ವಿಷ ಕುಡಿಸಿರುತ್ತೇನೆ ಎಂದು ತಮ್ಮ ಮುಂದೆ ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 13ಃ ಪ್ರಾ.ಸಾ.8 ಹೇಮಕುಮಾರ್, ಇವರು ತಮ್ಮ ಸಾಕ್ಷ್ಯದಲ್ಲಿ ಅಂದಾಜು 6 ವರ್ಷಗಳ ಹಿಂದೆ ಬೆಳಿಗ್ಗೆ ಎಸ್. ಬಿದರೆ ಗ್ರಾಮದಲ್ಲಿ

ಇರುವ ಮಮತಾಳ ತಂದೆ ಮನೆಗೆ ಆಕೆಗೆ ವಿಷ ಕುಡಿಸಿದ ಪ್ರಕರಣಕ್ಕೆ ಸಂಬಂಧಿಸಿದಂತೆ ಸ್ಥಳ ಪರಿಶೀಲನೆಗೆ ಅವರ ಮನೆಗೆ ಪೊಲೀಸರು ಬಂದಿದ್ದು, ಪೊಲೀಸರು ಸ್ಥಳ ಪರಿಶೀಲನೆ ಮಾಡಿ ಕೃತ್ಯ ಸ್ಥಳದಿಂದ ಕೃತ್ಯಕ್ಕೆ ಸಂಬಂಧಿಸಿದ ಒಂದು ಲೋಟವನ್ನು ನಿಶಾನೆ ಪಿ-15 ರಂತೆ ಅಮಾನತ್ತು ಪಡಿಸಿಕೊಂಡಿರುವುದಾಗಿ ಹಾಗೂ ನಿಶಾನೆ ಪಿ-16 ರಂತೆ ಪೋಟೋ ತೆಗೆದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 14ಃ ಪ್ರಾ.ಸಾ.9 ಗಂಗಾಧರ, ಇವರು ತಮ್ಮ ಸಾಕ್ಷ್ಯದಲ್ಲಿ ಮಮತಾಳ ಮನೆಯಲ್ಲಿ ಪೊಲೀಸರು ನಿಪಿ-15 ರಂತೆ ಸ್ಥಳ ಮಹಜರನ್ನು ಮಾಡಿಕೊಂಡಿರುವುದಾಗಿ ಹಾಗೂ ಮು.ಮಾ.1 ನ್ನು ಅಮಾನತ್ತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 15ಃ ಪ್ರಾ.ಸಾ.9 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪೋಲಿಸರು ಕಡೂರು ವೃತ್ತ ನಿರೀಕ್ಷಕರ ಕಚೇರಿಯಲ್ಲಿ ಅವರ ಸಮಕ್ಷಮ ನಿ.ಪಿ.17 ಮಹಜರ್ ನಡಿ ಮು.ಮಾ.2 ರಿಂದ 4 ವಶಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 16ಃ ಪ್ರಾ.ಸಾ.11 ಭಾಗ್ಯಮ್ಮ, ಇವರು ತಮ್ಮ ಸಾಕ್ಷ್ಯದಲ್ಲಿ ಕೃತ್ಯ ನಡೆದ ದಿನ ಮನೆಯಲ್ಲಿ ಇದ್ದು, ಮಮತಾಳ ತಾಯಿ ಕಿರುಚಿಕೊಂಡಿದ್ದರಿಂದ ತಾನು ಅವರ ಮನೆಗೆ ಹೋದಾಗ, ಮನೆಯಲ್ಲಿ ಮಮತಾ ಒದ್ದಾಡುತ್ತಿದ್ದುದ್ದಾಗಿ ತಾನು ಏನಾಯಿತು ಎಂದು ಮಮತಾಳನ್ನು ಕೇಳಿದಾಗ ಆಗ ಅವಳು ತನ್ನ ಗಂಡ ದಪ್ಪ ಆಗುವ ಔಷಧಿ ಎಂದು ಕುಡಿಸಿರುತ್ತಾನೆ ಎಂದು ಹೇಳಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 17ಃ ಪ್ರಾ.ಸಾ.11 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತನಗೆ ಸ್ಥಳದಲ್ಲಿ ವಾಸನೆ ಬಂದಿದ್ದು, ಮಮತಾಳು ಒಂದು ಲೋಟದಲ್ಲಿ ಕುಡಿಸಿರುವುದಾಗಿ ಒಂದು ಲೋಟವನ್ನು ತೋರಿಸಿದ್ದು, ಸದರಿ ಲೋಟದಿಂದ ಔಷಧಿ ತರಹ ವಾಸನೆ ಬರುತ್ತಿತ್ತು ಎಂದು ಮಮತಾಳು ಇಷ್ಟು ವಿಷಯವನ್ನು ಹೇಳಿ ಪ್ರಜ್ಞೆ ತಪ್ಪಿದ್ದು, ಕೃತ್ಯ ನಡೆದ ದಿನ ಮೃತ ಮಮತಾಳ ಮನೆಯಲ್ಲಿ ಆರೋಪಿಯಾದ

ನೀನು ಸಹ ಇದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 18ಃ ಪ್ರಾ.ಸಾ.12 ಅಬ್ದುಲ್ ಕಮಾಲ್, ಹೆಚ್.ಸಿ.62, ಇವರು ತಮ್ಮ ಸಾಕ್ಷ್ಯದಲ್ಲಿ ತನಿಖಾಧಿಕಾರಿಗಳು ಸ್ಥಳ ಮಹಜರ್, ಅಮಾನತ್ತು ಮಹಜರ್ ಮತ್ತು ಶವ ಪಂಚನಾಮೆ ಕಾಲಕ್ಕೆ ಇಲಾಖೆಯ ಸೋನಿ ಡಿಜಿಟಲ್ ಕ್ಯಾಮರದಿಂದ ತೆಗೆಸಿದ ಫೋಟೋಗಳನ್ನು ಸಿ.ಡಿ ಗೆ ವರ್ಗಾಯಿಸಿ ನಿ.ಪಿ.19 ರಂತೆ ಸಿ.ಡಿ. ಯನ್ನು ಕಲಂ 65B ಭಾರತೀಯ ಸಾಕ್ಷಿ ಅಧಿನಿಯಮ ರಡಿಯಲ್ಲಿ ನಿಪಿ-20 ರಂತೆ ದೃಢೀಕರಣ ಪತ್ರವನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 19ಃ ಪ್ರಾ.ಸಾ.13 ಗಂಗಾಧರ ಕೆ.ಓ., Pediatrician ಸಿನಿಯರ್ ಸ್ಪೆಷಲಿಸ್ಟ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ: 21.01.2015 ರಂದು ಸಖರಾಯಪಟ್ಟಣ ಪೊಲೀಸ್ ಠಾಣೆಯ ಸಿ.ಆರ್.ನಂ.15/2015 ಕ್ಕೆ ಸಂಬಂಧಪಟ್ಟಂತೆ ಬಂದ ಮನವಿಯ ಮೇರೆಗೆ ಬೆಳಗ್ಗೆ 10-00 ಗಂಟೆಯಿಂದ ಮಧ್ಯಾಹ್ನ 12-30 ಗಂಟೆಯವರೆಗೆ ಮಮತಾ W/o ಗುರುಮೂರ್ತಿ, 26 ವರ್ಷ ಇವರ ಮೃತದೇಹದ ಮರಣೋತ್ತರ ಪರೀಕ್ಷೆ ನಡೆಸಿ ಸಖರಾಯಪಟ್ಟಣ ಪೊಲೀಸ್ ಠಾಣೆಯ WASI ಲೀಲಾವತಿಯವರಿಗೆ 12-30 ಗಂಟೆಗೆ ಶವವನ್ನು ಹಸ್ತಾಂತರಿಸಿರುತ್ತೇನೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 20ಃ ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅವರು ಶವವನ್ನು ಪರೀಕ್ಷಿಸಿದ ನಂತರ ಅವರಿಗೆ ತಿಳಿದು ಬಂದಿದ್ದು, frothy secretion in the nostrils, faceal material seen around the anal region. In the stomach, there was thick milky fluid with partial digested food material with smell of insecticide. Rigor mortis was developed on all four limbs and the time since death was more than 12 hours from the time of postmortem examination ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 21ಃ ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು he has collected viscera from the part of stomach and its content, part of lever, spleen, kidney, heart, brain and lungs, blood sample, preservative used and part of larynx, trachea with hyoid bone, specimen of uterus and he handed over the cloths and belongings of the dead body to WASI Leelavathi ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 22ಃ ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅವರು ಮೃತ ಮಮತಾಳ ದೇಹದ ಮೇಲಿದ್ದ ಬಟ್ಟೆಗಳನ್ನು ಮಹಿಳಾ ಸಹಾಯಕ ಅರಕ್ಷಕ ನಿರೀಕ್ಷಕರಾದ ಲೀಲಾವತಿಯವರಿಗೆ ನೀಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 23ಃ ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 21.01.2015 ರಂದು ಮರಣೋತ್ತರ ಪರೀಕ್ಷಾ ವರದಿಯನ್ನು ನಿಶಾನೆ ಪಿ-21 ರಂತೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 24ಃ ಪ್ರಾ.ಸಾ.13 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 07.04.2022 ರಂದು ಮೃತಳ ಸಾವಿಗೆ ಕಾರಣದ ಬಗ್ಗೆ ಅವರ ಅಂತಿಮ ಅಭಿಪ್ರಾಯವನ್ನು ಕೋರಿ ಸಂಬಂಧಪಟ್ಟ ಪೋಲೀಸರು ದಿನಾಂಕ 23.04.2015 ರ ರಾಸಾಯನಿಕ ವಿಶ್ಲೇಷಣಾ ವರದಿಯನ್ನು ಅವರ ಮುಂದೆ ಹಾಜರುಪಡಿಸಿರುವುದಾಗಿ, ಸದರಿ ವರದಿಯ ಪ್ರಕಾರ, ಆರ್ಟಿಕಲ್ ನಂ.1, 2, 3, 5 ಮತ್ತು 6 ರಲ್ಲಿ ಕಾರ್ಬನೇಟ್ ಕೀಟನಾಶಕದ ಉಪಸ್ಥಿತಿಗಾಗಿ ಬಣ್ಣ ಪರೀಕ್ಷೆ ಮತ್ತು TLC ವಿಧಾನ, ಮರಣೋತ್ತರ ಪರೀಕ್ಷೆ ಮತ್ತು FSL ವರದಿಯಲ್ಲಿ ನೀಡಲಾದ ಸಂಶೋಧನೆಗಳ ಆಧಾರದ ಮೇಲೆ, ಕಾರ್ಬನೇಟ್ ಕೀಟನಾಶಕ ಸೇವನೆಯಿಂದ ಸಾವು ಸಂಭವಿಸುತ್ತದೆ ಎಂಬ ಅಭಿಪ್ರಾಯಿಸಿ ನಿಶಾನೆ ಪಿ-*22* ರಂತೆ ಅಂತಿಮ ಅಭಿಪ್ರಾಯವನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 25ಃ ಪ್ರಾ.ಸಾ.14 ಬಿ.ಟಿ. ಷಡಾಕ್ಷರಪ್ಪ, ನಿವೃತ್ತ ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಇವರು ತಮ್ಮ ಸಾಕ್ಷ್ಯದಲ್ಲಿ ಕಡೂರು ಪೊಲೀಸರು ದಿನಾಂಕಃ 20.01.2015 ರಂದು ಅವರನ್ನು ಪಿ.ಸಿ.ಪ್ರವೀಣ್ ಕುಮಾರ್ ರವರು ಎಸ್.ಬಿದರೆ ಗ್ರಾಮಕ್ಕೆ ಹೋಗಿ ಕೃತ್ಯ ನಡೆದ ಸ್ಥಳವನ್ನು ತೋರಿಸಿರುವುದಾಗಿ, ಸದರಿ ಸ್ಥಳದಲ್ಲಿ ನಿಪಿ-24 ರಂತೆ ಸ್ಥಳದ ನಕ್ಷೆಯನ್ನು ತಯಾರಿಸಿ ದಿನಾಂಕಃ 13.04.2015 ರಂದು ಸಂಬಂಧಿಸಿದ ಪೊಲೀಸರಿಗೆ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 26ಃ ಪ್ರಾ.ಸಾ.15 ಡಾಃ ಭಾಸ್ಕರ್ ಶೆಟ್ಟಿ, ವೈದ್ಯರು, ಕನಕ ಪಾಲಿ ಕ್ಲಿನಿಕ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 20.01.2015 ರಂದು ಮಧ್ಯಾಹ್ನ 12.00 ಗಂಟೆಯಿಂದ 1.00 ಗಂಟೆಯ ಒಳಗೆ ಇಬ್ಬರು ಗಂಡಸರು ಮತ್ತು ಒಬ್ಬ ಹೆಂಗಸು ಒಂದು ಆಟೋ ರಿಕ್ಷಾದಲ್ಲಿ ಬಂದಿದ್ದಾಗಿ, ಮೊದಲನೇ ಮಹಡಿಯಲ್ಲಿರುವ ಅವರ ಕ್ಲಿನಿಕ್ ಗೆ ಬಂದು ಆಟೋದಲ್ಲಿರುವ ಒಬ್ಬ ಮಹಿಳೆಗೆ ಸುಸ್ತಾಗಿದೆ ಬಂದು ನೋಡಿ ಎಂದಿದ್ದು, ತಾನು ಕೆಳಗೆ ಇಳಿದು ಹೋಗಿ ಆಟೋದಲ್ಲಿದ್ದ ಮಹಿಳೆಯನ್ನು ಪರೀಕ್ಷಿಸಿದಾಗ ಆಕೆ ಮೃತಪಟ್ಟಿರುವುದು ಕಂಡು ಬಂದಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 27ಃ ಪ್ರಾ.ಸಾ.16 ಸಿ.ಮಧುಸೂಧನ್, ಪೊಲೀಸ್ ನಿರೀಕ್ಷಕರು, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.01.2015 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ, ಮೃತಳ ಶವವನ್ನು ಕಡೂರು ಸರ್ಕಾರಿ ಆಸ್ಪತ್ರೆಯ ಶವಾಗಾರಕ್ಕೆ ರವಾನಿಸಿರುವುದಾಗಿ ಮತ್ತು ಕೃತ್ಯ ನಡೆದ ಸ್ಥಳದ ಸಂರಕ್ಷಣೆಗಾಗಿ ಸಿಬ್ಬಂದಿಗಳನ್ನು ನೇಮಿಸಿ, ಆರೋಪಿಯಾದ ನಿನ್ನ ಪತ್ತೆಗಾಗಿ ಚಾಸಾ.27 ರವರಿಗೆ ಸೂಚನೆಯನ್ನು ನೀಡಿದ್ದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 28ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ದಿನಾಂಕ 21.01.2015 ರಂದು ಕೃತ್ಯ ನಡೆದ ಸ್ಥಳಕ್ಕೆ ಭೇಟಿ ನೀಡಿ ಪಂಚರಾದ ಪ್ರಾಸಾ.8 ಮತ್ತು ಪ್ರಾಸಾ.9 ರವರ ಸಮಕ್ಷಮ ಪ್ರಾಸಾ.11 ರವರು ತೋರಿಸಿದ ಸ್ಥಳದಲ್ಲಿ ನಿಪಿ.15 ರಂತೆ ಬೆಳಿಗ್ಗೆ 11.00 ಗಂಟೆಯಿಂದ 11.45 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿರುವುದಾಗಿ, ಪ್ರಾಸಾ.11 ರವರು ಕೃತ್ಯ ನಡೆದ ಸ್ಥಳದಲ್ಲಿ ಬಿದ್ದಿದ್ದ ವಿಷದ ವಾಸನೆ ಇದ್ದ ಒಂದು ಸ್ಟೀಲ್ ಲೋಟವನ್ನು

ಹಾಜರುಪಡಿಸಿರುವುದಾಗಿ, ಆರೋಪಿಯಾದ ನೀನು ನಿನ್ನ ಹೆಂಡತಿಯನ್ನು ಕೊಲೆ ಮಾಡುವ ಉದ್ದೇಶದಿಂದ ಅದೇ ಲೋಟದಿಂದ ವಿಷವನ್ನು ಕುಡಿಸಿರುವುದಾಗಿ ನೀನು ತಿಳಿಸಿದ ಮೇರೆಗೆ ಅದನ್ನು ಅಮಾನತು ಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 29ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಆರೋಪಿಯಾದ ನಿನ್ನನ್ನು ಚಾಸಾ.27 ರವರು ತಿಪಟೂರು ನಗರದ ಬಸ್ ನಿಲ್ದಾಣದಲ್ಲಿ ವಶಕ್ಕೆ ಪಡೆದು ಮಧ್ಯಾಹ್ನ 2.30 ಗಂಟೆಗೆ ಅವರ ಮುಂದೆ ಕಚೇರಿಯಲ್ಲಿ ಹಾಜರುಪಡಿಸಿರುವುದಾಗಿ, ನಂತರ ದಸ್ತಗಿರಿ ಕ್ರಮ ಅನುಸುರಿಸಿ ನಿನ್ನ ಸ್ವಇಚ್ಛಾ ಹೇಳಿಕೆಯನ್ನು ಮಧ್ಯಾಹ್ನ 3.00 ಗಂಟೆಯಿಂದ 3.30 ಗಂಟೆಯವರೆಗೆ ಪಡೆದುಕೊಂಡಿರುವುದಾಗಿ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ30ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಸದರಿ ಹೇಳಿಕೆಯಲ್ಲಿ ಆರೋಪಿಯಾದ ನೀನು "ತಾನು ಓಡಿ ಹೋಗುವಾಗ ವಿಷದ ಬಾಟಲಿಯನ್ನು ಅಲ್ಲಿಯೇ ಓಣಿಯಲ್ಲಿ ಬಿಸಾಡಿದ್ದಾಗಿ, ತನ್ನೊಂದಿಗೆ ಬಂದರೆ ತೋರಿಸಿ ಹಾಜರುಪಡಿಸುತ್ತೇನೆ" ಎಂದು ತಿಳಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 31ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಆರೋಪಿಯಾದ ನಿನ್ನ ಸ್ವ ಇಚ್ಛಾ ಹೇಳಿಕೆಯ ಆಧಾರದ ಮೇಲೆ ತನಿಖೆ ಕೈಗೊಳ್ಳಲು ಎಸ್.ಬಿದರೆ ಗ್ರಾಮದ ಲಕ್ಷ್ಮೀ ರಂಗನಾಥ ಸ್ವಾಮಿ ದೇವಸ್ಥಾನದ ಬಳಿ ಆರೋಪಿಯಾದ ನಿನ್ನೊಂದಿಗೆ ಹೋಗಿರುವುದಾಗಿ, ಅಲ್ಲಿಗೆ ಪಂಚರಾದ ಪ್ರಾಸಾ.7 ಮತ್ತು ಚಾಸಾ.11 ರವರೊಂದಿಗೆ ಆರೋಪಿಯಾದ ನೀನು ತೋರಿಸಿದ ಮಾರ್ಗದಲ್ಲಿ ಜೀಪನ್ನು ಚಲಾಯಿಸಿಕೊಂಡು ಹೋಗಿರುವುದಾಗಿ, ನೀನು ಮಮತಾಳ ಮನೆಯ ಬಳಿ ಇದ್ದ ಒಂದು ಓಣಿಗೆ ಹೋಗಿ ಅಲ್ಲಿ ತೆಂಗಿನ ಸಿಪ್ಪೆ ಮಟ್ಟೆಗಳ ಚೀಲಗಳ ಸಂದಿಯಲ್ಲಿ ಒಂದು ಬಾಟಲಿಯನ್ನು ತೆಗೆದು ತೋರಿಸಿರುವುದಾಗಿ, ಅದೇ ಬಾಟಲಿಯಲ್ಲಿದ್ದ ವಿಷವನ್ನು ನಿನ್ನ ಹೆಂಡತಿಗೆ ಕುಡಿಸಿ ಆಕೆಯ ಕೊಲೆ ಮಾಡಿರುವುದಾಗಿ ತಿಳಿಸಿದ್ದುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 32ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಸದರಿ ಬಾಟಲಿಯನ್ನು ಪರಿಶೀಲಿಸಲಾಗಿ ಅದು ಸಿಲ್ವರ್ ಬಣ್ಣದ ಬಾಟಲಿಯಾಗಿರುವುದಾಗಿ ಅದರ ಮೇಲೆ FMC TRANSPORTEX 100 m.l ಎಂಬ ಸ್ಟಿಕ್ಕರ್ ಇದ್ದು, ಸಂಜೆ 4.30 ಗಂಟೆಯಿಂದ 5.15 ಗಂಟೆಯವರೆಗೆ ನಿಪಿ.12 ರಂತೆ ಪಂಚನಾಮೆಯನ್ನು ಜರುಗಿಸಿ ಅದನ್ನು ಅಮಾನತುಪಡಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 33ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ಅದೇ ದಿನ ಆರೋಪಿಯಾದ ನಿನ್ನನ್ನು ರಿಮ್ಯಾಂಡ್ ಅರ್ಜಿಯೊಂದಿಗೆ ಸಿಬ್ಬಂದಿ ಮುಖಾಂತರ ನ್ಯಾಯಾಲಯಕ್ಕೆ ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 34ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಮೃತಳ ಮರಣೋತ್ತರ ಪರೀಕ್ಷೆ ನಡೆಸಿದ್ದ ಚಾಸಾ.17 ರವರು ಪರೀಕ್ಷೆಯ ಕಾಲದಲ್ಲಿ ಸಂಗ್ರಹಿಸಿದ್ದ ಎಂಟು ಸೀಲಾದ viscera ವಸ್ತುಗಳು ಮತ್ತು ಬಟ್ಟೆಗಳನ್ನು ಚಾಸಾ.22 ರವರು ದಿನಾಂಕ 23.01.2015 ರಂದು ಕಚೇರಿಯಲ್ಲಿ ಅವರ ಮುಂದೆ ಹಾಜರುಪಡಿಸಿರುವುದಾಗಿ ಅವುಗಳನ್ನು ಪಂಚರಾದ ಪ್ರಾಸಾ.8 ಮತ್ತು ಪ್ರಾಸಾ.9 ರವರ ಸಮಕ್ಷಮ ನಿಪಿ.17 ರಂತೆ ಮಧ್ಯಾಹ್ನ 12.00 ಗಂಟೆಯಿಂದ 12.30 ಗಂಟೆಯವರೆಗೆ ಪಂಚನಾಮೆಯನ್ನು ಜರುಗಿಸಿ ಅವುಗಳನ್ನು ಠಾಣಾ ಮಾಲುಪಟ್ಟಿ ಸಂಖ್ಯೆ 9/2015 ರಲ್ಲಿ ನಮೂದಿಸಿಕೊಂಡು ನ್ಯಾಯಾಲಯಕ್ಕೆ ಸಲ್ಲಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 35ಃ ಪ್ರಾ.ಸಾ.16 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಚಾಸಾ.22 ರವರು ಹಾಜರುಪಡಿಸಿದ ಮೃತಳ ಮರಣೋತ್ತರ ಪರೀಕ್ಷಾ ವರದಿಯನ್ನು ನಿಪಿ.21 ರಂತೆ ಪಡೆದುಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 36ಃ ಪ್ರಾ.ಸಾ.17 ಗಿರೀಶ್ ಕೆ.ಎನ್., ಪಿ.ಎಸ್.ಐ, ಸಿ.ಐ.ಡಿ. ಅರಣ್ಯ ಘಟಕ, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 20.11.2015 ರಂದು ಸಂಜೆ 7.00 ಗಂಟೆ ಸಮಯದಲ್ಲಿ ಚಾಸಾ.1 ರವರು

ಠಾಣೆಗೆ ಹಾಜರಾಗಿ ನಿಪಿ.1 ರಂತೆ ನೀಡಿದ ಲಿಖಿತ ದೂರನ್ನು ಪಡೆದು ಠಾಣಾ ಮೊಕದ್ದಮೆ ಸಂಖ್ಯೆಃ 15/2015 ರಲ್ಲಿ ಐಪಿಸಿ ಕಲಂ 302 ರೀತಿ ಪ್ರಕರಣ ದಾಖಲಿಸಿ ನಿಪಿ.30 ರಂತೆ ಪ್ರಥಮ ವರ್ತಮಾನ ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ನಿವೇದಿಸಿಕೊಂಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 37ಃ ಪ್ರಾ.ಸಾ.18 ಬಿ.ಟಿ. ಚಿದಾನಂದ ಸ್ವಾಮಿ, ನಿವೃತ್ತ ಡಿ.ವೈ.ಎಸ್.ಪಿ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 22.02.2015 ರಂದು ಮೃತಳ ಮರಣೋತ್ತರ ಪರೀಕ್ಷಾ ಸಮಯದಲ್ಲಿ ಕಡೂರು ಸರ್ಕಾರಿ ಆಸ್ಪತ್ರೆಯ ವೈಧ್ಯಾಧಿಕಾರಿಗಳು ಸಂಗ್ರಹಿಸಿಕೊಟ್ಟಿದ್ದ 8 ಸೀಲಾದ ವಸ್ತುಗಳನ್ನು ಚಾಸಾ.23 ರವರ ಮೂಲಕ ಆರ್ ಎಫ್ ಎಸ್ ಎಲ್ ಮಂಗಳೂರು ರವರಿಗೆ ಕಳುಹಿಸಿಕೊಟ್ಟಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 38ಃ ಪ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಅದೇ ದಿನ ಪ್ರಾಸಾ.1 ರವರನ್ನು ತರೀಕೆರೆ ಹಿರಿಯ ಸಿವಿಲ್ ಮತ್ತು ಜೆ.ಎಂ.ಎಫ್.ಸಿ. ನ್ಯಾಯಾಧೀಶರ ಬಳಿ ಸಿ.ಆರ್.ಪಿ.ಸಿ. ಕಲಂ 164 ರಡಿಯಲ್ಲಿ ಹೇಳಿಕೆಯನ್ನು ದಾಖಲಿಸಲು ಸಿಬ್ಬಂದಿ ಮೂಲಕ ಹಾಜರುಪಡಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 39ಃ ಪ್ರಾ.ಸಾ.18 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ನಂತರ ತನಿಖೆಯಲ್ಲಿ ಆರೋಪಿಯಾದ ನಿನ್ನ ವಿರುದ್ಧ ಆರೋಪ ಸಾಬೀತಾದ ಕಾರಣ ನ್ಯಾಯಾಲಯಕ್ಕೆ ದಿನಾಂಕ 17.04.2015 ರಂದು ದೋಷಾರೋಪಣಾ ಪಟ್ಟಿಯನ್ನು ಸಲ್ಲಿಸಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 40ಃ ಪ್ರಾ.ಸಾ.19 ಕೆ.ಆರ್.ನಾಗರಾಜ, ಡಿ.ವೈ.ಎಸ್.ಪಿ., ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕಃ 31.03.2022 ರಂದು Shivamogga Institution of Medical Science ನ Histopathology ವಿಭಾಗದ ಮುಖ್ಯಸ್ಥರಿಗೆ ಮನವಿ ಸಲ್ಲಿಸಿರುವುದಾಗಿ, ಮೃತಳ Histopathology ವರದಿಯನ್ನು ನೀಡಲು ಮತ್ತು ವೈದ್ಯಾಧಿಕಾರಿಗಳು ಶೇಖರಿಸಿಕೊಟ್ಟಿದ್ದ LARYNX TRACHEA WITH HYOID BONE ತುಂಡಾಗಿದೆಯೇ ಮತ್ತು ಮೃತಳನ್ನು

ಕತ್ತು ಹಿಸುಕಿ/ಉಸಿರು ಗಟ್ಟಿಸಿ ಸಾಯಿಸಿರುವ ಸಾಧ್ಯತೆಗಳು ಇವೆಯೇ ಎಂದು ಅಭಿಪ್ರಾಯ ವರದಿಯನ್ನು ನೀಡುವಂತೆ ಕೋರಿರುವುದಾಗಿ, ದಿನಾಂಕ 07.04.2022 ರಂದು ಕಡೂರು ಸಾರ್ವಜನಿಕ ಆಸ್ಪತ್ರೆಯ ವೈದ್ಯಾಧಿಕಾರಿಗಳಾದ ಪ್ರಾ.ಸಾ.13 ರವರಿಂದ ಮೃತಳ ಸಾವಿನ ಬಗ್ಗೆ ನಿಪಿ.22 ರಂತೆ ಅಂತಿಮ ಅಭಿಪ್ರಾಯ ಪಡೆದುಕೊಂಡಿರುವುದಾಗಿ ಹಾಗೂ ಮೃತಳ ಸಾವು ವಿಷ ಸೇವನೆಯಿಂದ ಆಗಿರುತ್ತದೆ ಎಂದು ಅಭಿಪ್ರಾಯ ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 41ಃ ಫ್ರಾ.ಸಾ.20 ನಾಗರಾಜು ಪಿ.ಎಂ., ಸಿನಿಯರ್ ಸೈಂಟಿಫಿಕ್ ಆಫೀಸರ್, ಇವರು ತಮ್ಮ ಸಾಕ್ಷ್ಯದಲ್ಲಿ ದಿನಾಂಕ 23.03.2015 ರಂದು ಚಿಕ್ಕಮಗಳೂರಿನ ಸಖರಾಯಪಟ್ಟಣ ಪಿ.ಎಸ್.ನ ಅಪರಾಧ ಸಂಖ್ಯೆ.15/2015 ರ 6 ಸೀಲ್ ಮಾಡಿದ ವಸ್ತುಗಳನ್ನು ಪರೀಕ್ಷೆಗಾಗಿ ಕಳುಹಿಸಿದ್ದು, ಅವುಗಳನ್ನು ತೆಗೆದು ನೋಡಿದಾಗ :- 1. Stomach and its contents (2) Part of liver, spleen, kidney, heart, brain and lung (3) Blood (4) Preservative used by common salt solution (5) One sealed cloth packet containing plastic bottle and (6) One sealed cloth packet containing steel cup ರಂತೆ ಕಂಡುಬಂದಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 42ಃ ಫ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ತಾನು ಸದರಿ ವಸ್ತುಗಳನ್ನು ವಿಶ್ಲೇಷಿಸಿದ್ದು, ವಸ್ತು ನಂ.1, 2, 3, 5 ಮತ್ತು 6 ರಲ್ಲಿ ಕಾರ್ಬನೇಟ್ ಕೀಟನಾಶಕವನ್ನು ಪತ್ತೆಹಚ್ಚಲಾಗಿದೆ ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 43ಃ ಫ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಪರೀಕ್ಷೆಯ ನಂತರ ವಸ್ತು ನಂ.5 ಮತ್ತು 6 ನ್ನು ತನಿಖಾಧಿಕಾರಿಯವರಿಗೆ ವಾಪಸ್ಸು ಕಳುಹಿಸಿದ್ದುದಾಗಿ, ಉಳಿದ ವಸ್ತುಗಳು ಜೈವಿಕ ಅಪಾಯಕಾರಿಯಾಗಿರುವುದರಿಂದ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ ಅವುಗಳನ್ನು ನಾಶಪಡಿಸಲಾಯಿತು ಎಂದು ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 44ಃ ಪ್ರಾ.ಸಾ.20 ಇವರು ತಮ್ಮ ಸಾಕ್ಷ್ಯದಲ್ಲಿ ಮುಂದುವರೆದು ಇದಕ್ಕೆ ಸಂಬಂಧಪಟ್ಟಂತೆ ಅವರ ಉಪನಿರ್ದೇಶಕರ ಮೂಲಕ ತನಿಖಾಧಿಕಾರಿಗೆ ವರದಿ ನೀಡಿರುವುದಾಗಿ ಮತ್ತು ಪರೀಕ್ಷೆಯ ನಂತರ ಆ ವಸ್ತುಗಳನ್ನು ಪ್ಯಾಕ್ ಮಾಡಿ ಮತ್ತು ಅದನ್ನು ಮಂಗಳೂರಿನ ಆರ್‌ಎಫ್‌ಎಸ್‌ಎಲ್‌ನ ಮಾದರಿ ಮುದ್ರೆಯೊಂದಿಗೆ ಸೀಲ್ ಮಾಡಿ ಅವುಗಳನ್ನು ಸಂಬಂಧಪಟ್ಟ ಪೊಲೀಸರಿಗೆ ನಿಪಿ-34 ರಂತೆ ವರದಿಯನ್ನು ನೀಡಿರುವುದಾಗಿ ಸಾಕ್ಷ್ಯ ನುಡಿದಿರುತ್ತಾರೆ. ಈ ಬಗ್ಗೆ ನೀವೇನು ಹೇಳುತ್ತೀರಿ?

ಉತ್ತರಃ ಸುಳ್ಳು

ಪ್ರಶ್ನೆ 45ಃ ನೀವೇನಾದರೂ ಹೇಳುವುದು ಇದೆಯೇ?

ಉತ್ತರಃ ಇಲ್ಲ

ಪ್ರಶ್ನೆ 46ಃ ನಿಮ್ಮ ಪರವಾಗಿ ಯಾವುದಾದರೂ ಸಾಕ್ಷಿ ವಿಚಾರಣೆ ಮಾಡಿಸುತ್ತೀರಃ

ಉತ್ತರಃ ಇಲ್ಲ

(ಮೇಲಿನ ಪ್ರಶ್ನೆಗಳನ್ನು ಆರೋಪಿತನಿಗೆ ಕೇಳಿ ಆತನು ಕೊಟ್ಟ ಉತ್ತರವನ್ನು ನಾನೇ ಸ್ವತಃ ಕೇಳಿ ಬರೆದುಕೊಂಡಿರುವುದು ನಿಜವಾಗಿದೆ ಎಂದು ದೃಢೀಕರಿಸುತ್ತೇನೆ).

ದಿನಾಂಕಃ 12.06.2023.

Sd/-
(ಭಾನುಮತಿ ಬಿ.ಸಿ. ),
2 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಚಿಕ್ಕಮಗಳೂರು.